ಸರ್ಕಾರದ ಆದೇಶವನ್ನು ದಿನಾಂಕ ೮-೧೨-೧೯೯೨ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಹೀಗೆ ಮೇಲ್ದರ್ಜೆಗೇರಿಸಿದ ರಸ್ತೆಗಳಿಗೆ ಪ್ರತಿ ಕಿ. ಮೀ. ಉದ್ದಕ್ಕೆ ೧.೫ ಲಕ್ಷ ರೂಗಳ ಅಂದಾಜಿನಲ್ಲಿ ರಸ್ತೆಗಳನ್ನು ಉತ್ತಮಪಡಿಸಲು ಯೋಚಿಸಲಾಗಿದೆ.

ಇ) ಈ ರೀತಿ ಮೇಲ್ದರ್ಜೆಗೆ ಏರಿಸಿದ ಕೆಲವು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣವನ್ನು ಮಾಡಲಾಗುವುದು.

ಚಿಂತಾಮಣಿ ತಾಲ್ಲೂಕಿನಲ್ಲಿ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ

೧೯೬೫ (೧೫೫೫೩) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಂತಾಮಣಿ ತಾಲ್ಲೂಕು (ಕೋನಪ್ಪಲ್ಲಿ ಮಂಡಲ್) ಅಂಬಾಜಿದುರ್ಗ ಹೋಬಳಿ ಚೌಂಪ್ರ ಹಳ್ಳಿ ಆತ್ತಿಕೆರೆ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ ಪ್ರಾರಂಭವಾಗಿದೆಯೇ?

ಆ) ಹಾಗೇನಾದರೂ ಅಂದಾಜು ತಯಾರಿಸಿದ್ದರೆ ಅಂದಾಜು ಮೊಬಲಗು ಎಷ್ಟು? ತಯಾರಿಸಿದ ದಿನಾಂಕ ಮತ್ತು ಈ ಬಗ್ಗೆ ಎಷ್ಟು ಕೆಲಸ ಆಗಿದೆ?

ಇ) ಸದರಿ ಕೆಲಸದ ಬಗ್ಗೆ ಕೆಲವರು ಲೋಕಾಯುಕ್ತಕ್ಕೆ ದೂರು ನೀಡಿದ್ದು ಇದರ ಬಗ್ಗೆ ವಿಚಾರಣೆ ನಡೆದಿದೆಯೇ? ಮತ್ತು ಸದರಿ ಅಧಿಕಾರಿಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಈ) ಬಹಳ ದಿನಗಳಿಂದ ಈ ಕಾಮಗಾರಿ ಕೆಲಸ ನಿಂತು ಹೋಗಿ, ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಹೌದು.

ಆ) ಅಂದಾಜು ಮೊತ್ತ ೯.೯೮ ಲಕ್ಷ ರೂ.ಗಳಾಗಿದ್ದು ದಿನಾಂಕ ೨೧-೨-೧೯೯೦ರಂದು ತಯಾರಿಸಲಾಗಿದೆ. ನೀರಿನ ಗರಿಷ್ಟ ಮಟ್ಟದವರೆಗೆ ಏರಿಯನ್ನು ನಿರ್ಮಿಸಲಾಗಿದೆ ಹಾಗೂ ಕೋಡಿಯನ್ನು ನಿರ್ಮಿಸಲಾಗಿದೆ.

ಇ) ಸದರಿ ಕೆಲಸದ ಬಗ್ಗೆ ಲೋಕಾಯುಕ್ತದ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಸಂಬಂಧಪಟ್ಟ ಕಡತಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಲೋಕಾಯುಕ್ತದೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಬಂದಿದೆ.

ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ವಸತಿ ಗೃಹವು ಹೀನಾಯ ಸ್ಥಿತಿಯಲ್ಲಿರುವ ಬಗ್ಗೆ

೧೯೬೬ (೧೫೫೪೪) ಶ್ರೀ ಅಂಜನಾ ಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಗೆ